IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಅಮರ ಜ್ಯೋತಿ ಭಗತ್‌ಸಿಂಗ್

ಇಂದ

ಭಾಗ್ಯಮ್ಮ

ಅತಿಥಿ ಉಪನ್ಯಾಸಕಿ

ಯು.ವಿ.ಸಿ.ಇ. ಬೆಂಗಳೂರು

ವಿಳಾಸ

ಭಾಗ್ಯಮ್ಮ

# ೮೯೩, ಜೆ.ಎಸ್.ಎಸ್.ಬಡಾವಣೆ

ಮೈಸೂರು- ೫೭೦೦೨೮

ಪಂಜಾಬಿಗೆ ಮಾತ್ರವಲ್ಲದೆ ಇಡೀ ರಾಷ್ಟ್ರಕ್ಕೆ ಚೈತನ್ಯ ಚಿಲುಮೆಯಂತಿರುವ ಚಾರಿತ್ರಿಕ ವ್ಯಕ್ತಿ ಭಗತ್‌ಸಿಂಗ್, ಆತನ ಸ್ಫೂರ್ತಿ ಇಂದಿಗೂ ನಮಗೆ ದಿಗ್ದರ್ಶನ ಮಾಡಲು ಶಕ್ತವಾಗಿದೆ, ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದಾಗ ವಿಭಿನ್ನ ಮನೋಭಾವದ, ವಿಭಿನ್ನ ಸೈದ್ಧಾಂತಿಕ ಹಿನ್ನೆಲೆಯ ಹೋರಾಟಗಾರರು ಒಂದೇ ಗುರಿಗಾಗಿ ಹೋರಾಡಿದ್ದಾರೆ. ಎಷ್ಟೇ ವಿರೋಧಗಳಿದ್ದರೂ, ಯಾರೂ ಗುರಿಯಿಂದ ವಿಚಲಿತರಾಗಲಿಲ್ಲ. ಸ್ವಾತಂತ್ರ್ಯವೊಂದನ್ನೇ ಗುರಿಯಾಗಿಟ್ಟುಕೊಂಡು ಅದರ ಗಳಿಕೆಗೆ ಯಾವುದೇ ವಿಧಾನವನ್ನಾದರೂ ಬಳಸಬಹುದು ಎನ್ನುವವರು ಮತ್ತು ವೈಜ್ಞಾನಿಕ ಸಮಾಜವಾದವೇ ರಾಷ್ಟ್ರದ ಎಲ್ಲ ಸಮಸ್ಯೆಗಳಿಗೂ ಪರಿಹಾರವೆಂದ ಭಗತ್‌ಸಿಂಗ್. ರಾಜಕೀಯ ಸ್ವಾತಂತ್ರ್ಯದ ಆಧಾರದ ಮೇಲೆ ಮಾತ್ರ ರಾಷ್ಟ್ರೀಯ ವಿಕಾಸ ಸಾಧ್ಯವೆಂಬ ದೃಷ್ಟಿಯಿಂದ ಹೋರಾಡಿದ ಚಿಂತಕ ಭಗತ್‌ಸಿಂಗ್. ನೈಜ ಮಾರ್ಕ್ಸ್‌ವಾದಿ ಮನೋವೃತ್ತಿಯ ಎಲ್ಲಾ ಮುಖಗಳಾದ ಮಾನವ ಪ್ರೇಮಿ, ಸೈದ್ಧಾಂತಿಕ ಪ್ರಖರತೆ, ಅತ್ಯುನ್ನತ ನೈತಿಕ ಪ್ರಜ್ಞೆ, ತ್ಯಾಗ, ಧೈರ್ಯ ಇವೆಲ್ಲವುಗಳನ್ನೂ ಒಳಗೊಂಡಂತೆ, ಭಾರತದ ಸ್ವಾತಂತ್ರ್ಯಕ್ಕೆ ನಡೆದ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರಗಳನ್ನು ಹೋರಾಟದ ಅಂತಿಮ ದಿನಗಳಲ್ಲಿ ಬ್ರಿಟಿಷ್ ಸರ್ಕಾರ ಮಾತ್ರವಲ್ಲದೆ, ವಿಭಿನ್ನ ಸೈದ್ಧಾಂತಿಕ ನಿಲುವಿನ ಹೋರಾಟಗಾರರ ಸಹಕಾರವನ್ನೇ ಪಡೆಯದ ಭಗತ್‌ಸಿಂಗ್ ನಂತಹ ಕ್ರಾಂತಿಕಾರಿಗಳ ಬಗ್ಗೆ ಪಾರದರ್ಶಕವಾಗಿ, ವೈಚಾರಿಕವಾಗಿ ಇಂದಿಗೂ ಚಿಂತಿಸಬೇಕಾಗಿದೆ.

ಹನ್ನೆರಡು ವರ್ಷದ ಭಗತ್‌ಸಿಂಗ್ ಮನಸ್ಸಿನಲ್ಲಿ ಮಣ್ಣಿನ ಬಗ್ಗೆ ಹುಟ್ಟಿದ ಪ್ರೀತಿಯೇ ಸ್ಫೂರ್ತಿಯಾಗಿತ್ತು. ಜಲಿಯನ್ ವಾಲಾಬಾಗ್‌ನಲ್ಲಿ ವಾರ್ಷಿಕ ಸಂಭ್ರಮದ ಸುಗ್ಗಿಯ ವೈಶಾಖ ಆಚರಿಸುತ್ತಿದ್ದಾಗ ಜನರಲ್ ಡಯರ್‌ನ ಆಜ್ಞೆಯ ಮೇರೆಗೆ ಬ್ರಿಟಿಷ್ ಸೈನಿಕರು ೧೬೫೦ ಸುತ್ತು ಗುಂಡು ಹಾರಿಸಿ ೧೫೧೬ ಜನ ಮುಗ್ಧ ಅಮಾಯಕ ಜನರನ್ನು ಕೊಂದರು. ಎಲ್ಲೆಲ್ಲೂ ರಕ್ತದ ಹೊಳೆ, ರತನ್ ದೇವಿ ತನ್ನ ಗಂಡನ ದೇಹವನ್ನು ಪತ್ತೆಮಾಡಿ ಬ್ರಿಟಿಷರ ಕಣ್ಣು ತಪ್ಪಿಸಿ ಪೊದೆಗಳಲ್ಲಿ ಇಡೀ ರಾತ್ರಿ ಕಳೆದ ಘೋರತೆ. ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್ ಪರಿಚಯ ಮಾಡುವಾಗ ಆಯಸ್ಥಳ ಮತ್ತು ಕಾಲ ಹಾಗೂ ಸನ್ನಿವೇಶಗಳನ್ನು ಹಾಗೂ ಇಡೀ ವಸ್ತು ಮತ್ತು ಘಟನೆಗಳನ್ನು ದಾಖಲಿಸುತ್ತಾ ಕ್ರಾಂತಿಕಾರಿ ಭಗತ್‌ಸಿಂಗ್‌ನ ಹೋರಾಟದ ಹಾದಿಯನ್ನು ಸ್ಮರಿಸಬೇಕಾಗಿದೆ.

೧೯೦೭ ಸೆಪ್ಟೆಂಬರ್ ೨೭ ರಂದು ಪಂಜಾಬಿನ ಜಾಲಂಧರ್ ಜಿಲ್ಲೆಯ ಖಾತ್ಕರ್ ಕಲಾನ್ ಎಂಬ ಹಳ್ಳಿಯಲ್ಲಿ ಈಗ ಪಾಕಿಸ್ತಾನಕ್ಕೆ ಸೇರಿರುವ ಲಾಯಲ್ ಪುರ್ ಜಿಲ್ಲೆಯ ಜಾರನ್ ವಾಲ್ ತಾಲ್ಲೂಕಿನಲ್ಲಿರುವ ಬಂಗಾ ಎಂಬ ಹಳ್ಳಿಗೆ ಇವರ ಮನೆತನ ನೆಲೆಸಿದೆ. ಭಗತ್‌ಸಿಂಗ್ ಹುಟ್ಟಿದ್ದು ಆ ಹಳ್ಳಿಯಲ್ಲಿ ಭಗತ್‌ಸಿಂಗ್ ಮನೆತನವೇ ರಾಷ್ಟ್ರ ಪ್ರೇಮಕ್ಕೆ ಹೆಸರಾದದ್ದು. ಕಾಂಗ್ರೆಸ್ ಸಂಸ್ಥೆಯೊಡನೆ ಸಂಪರ್ಕ ಹೊಂದಿದವನು ಭಗತ್‌ಸಿಂಗ್ ತಾತ ಅರ್ಜುನ್‌ಸಿಂಗ್, ತಂದೆ ಕಿಶನ್‌ಸಿಂಗ್ ಚಿಕ್ಕಪ್ಪ ಅಜಿತ್‌ಸಿಂಗ್ ರೈತರು ಮತ್ತು ಸೈನಿಕರಲ್ಲಿ ಬಂಡೇಳುವ ಮನೋಭಾವವನ್ನು ಬೆಳೆಸುತ್ತಿದ್ದ ಅದು ಸಹಜವಾಗಿಯೇ ಭಗತ್‌ಸಿಂಗ್ ಮೇಲೆ ಹೆಚ್ಚು ಪ್ರಭಾವ ಬೀರಿತ್ತು. ಮನೆತನದ ಬಳುವಳಿಯಾಗಿ ಭಗತ್‌ಸಿಂಗ್‌ರಿಗೆ ದೇಶಪ್ರೇಮ ಹುಟ್ಟಿನಿಂದಲೇ ಬಂದಿತ್ತು. ರಾಷ್ಟ್ರಪ್ರೇಮಕ್ಕೆ ಹೆಸರಾದದ್ದು ಎಂಬ ವಾಸ್ತವ ಸತ್ಯವನ್ನು ಪ್ರತಿಯೊಂದರ ಘಟನೆ, ಸನ್ನಿವೇಶಗಳು ತಿಳಿಯಬೇಕಾಗಿದೆ. ಭಗತ್‌ಸಿಂಗ್ ಮನೆತನವು ಹಿರಿಯರ ದೇಶಪ್ರೇಮ ಮತ್ತು ಅವರ ಬಂಧನ, ಸೆರೆವಾಸ ಇತ್ಯಾದಿಗಳ ಪ್ರಭಾವವು ಕ್ರಾಂತಿಯೊಂದರ ಮೊಳಕೆಗೆ ಸಿದ್ಧವಾಯಿತು.

ಭಗತ್‌ಸಿಂಗ್ ಜೀವನದ ಹಿನ್ನೆಲೆಯನ್ನು ಗುರುತಿಸಲು ಪುರೋಗಾಮಿ ಚಳವಳಿಯಲ್ಲಿ ಭಾಗವಹಿಸಿ ಪೋಲೀಸರಿಂದ ಬಂಧನಕ್ಕೆ ವಾರೆಂಟ್ ಪಡೆದುಕೊಂಡು ರಾತ್ರೋರಾತ್ರಿ ಲಾಹೋರಿಗೆ ತೆರಳಿಯಾಗಿದೆ. ಇನ್ನೊಂದು ರಾಜಕೀಯ ಬೆಳವಣಿಗೆಯೆಂದರೆ ಘದರ್ ಪಕ್ಷದ ಉದ್ಭವ ಮತ್ತು ಅದರ ಕೊಡುಗೆ. ಭಗತ್ ಸಿಂಗ್ ಮತ್ತು ಆತನ ಸಂಗಡಿಗರು ಕಟ್ಟಿದ ನೌಜವಾನ್ ಭಾರತ್ ಸಭಾ ಮತ್ತು ಹಿಂದೂಸ್ಥಾನ್ ಗಣತಂತ್ರ ಸಂಘಟನೆಗಳು ಘದರ್ ಪಕ್ಷದ ಪ್ರಭಾವದಿಂದ ಮೂಡಿಬಂದಿದ್ದುವು. ರಾಷ್ಟ್ರ ಮತ್ತು ಮಾನವ ಜನಾಂಗದ ಜೀವನದ ಸಂದರ್ಭದಲ್ಲಿ ಮತೀಯ ಭಾವನೆಗಳಿಗೆ ಎಳ್ಳಷ್ಟು ಸ್ಥಾನವಿಲ್ಲವೆಂದು ಬಗೆದು ಅಂತೆಯೇ ನಡೆದುಕೊಂಡ ವ್ಯಕ್ತಿ ಭಗತ್‌ಸಿಂಗ್. ಬಾಲ್ಯದಲ್ಲಿ ಮತ್ತು ಶಾಲಾ

ವಿದ್ಯಾರ್ಥಿ ಜೀವನದಲ್ಲಿ ಅವನಿಗಿದ್ದ ಪುಸ್ತಕ ಪ್ರೀತಿ, ರಾಷ್ಟ್ರೀಯ ಭಾವನೆ, ಜನಪರ ಕಾಳಜಿಗಳು ಮಹತ್ವವಾದವು. ವಿದ್ಯಾರ್ಥಿಯಾಗಿದ್ದಾಗಲೇ ೧೯೨೧ರ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದ. ಮನೆಯಲ್ಲಿ ಮದುವೆ ವಿಚಾರ ಬಂದಾಗ, "ಇದು ಮದುವೆಗೆ ಕಾಲವಲ್ಲ, ದೇಶವು ನನ್ನನ್ನು ಕರೆಯುತ್ತಿದೆ. ನನ್ನ ತನುಮನ ಧನವನ್ನೆಲ್ಲಾ ದೇಶಕ್ಕೆ ಅರ್ಪಿಸಬೇಕೆಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ, ಆದ್ದರಿಂದ ನನ್ನನ್ನು ಕುಟುಂಬಕ್ಕೆ ಗಂಟು ಹಾಕಬೇಡಿ ಬದಲು ನನ್ನ ಉದ್ದೇಶ ಸಾಧನೆಗೆ ನಿಮ್ಮ ಹರಕೆ ನೀಡಿ" ಎಂಬ ಉತ್ತರದಿಂದ ತನ್ನ ಭವಿಷ್ಯದ ಬಗ್ಗೆ ಧೃಡ ನಿರ್ಧಾರವನ್ನು ತೆಗೆದುಕೊಂಡಿದ್ದರು. ೧೯೨೪ರ ಅಥವಾ ಮಡಿಯಲು ಶಪಥ ಮಾಡಿಯೇ ನಾನಿಲ್ಲಿಗೆ ಬಂದಿರುವುದು' ಎಂದು ಸ್ಪಷ್ಟಪಡಿಸಿದರು. ೧೯೨೫ರಲ್ಲಿ ಆಗಸ್ಟ್ ೯ರಂದು ಕಾಕೋರಿ ರೈಲು ನಿಲ್ದಾಣದಲ್ಲಿ ಸರ್ಕಾರದ ಹಣವನ್ನು ಲೂಟಿ ಮಾಡಲಾಯಿತು. ಕಾರಣಾಂತರದಿಂದ ಆ ಯೋಜನೆಯಲ್ಲಿ ಭಗತ್‌ಸಿಂಗ್ ಪಾಲ್ಗೊಳ್ಳಲಿಲ್ಲ. ನಂತರ ೧೯೨೬ರ ಫೆಬ್ರವರಿಯಲ್ಲಿ ನಡೆದ ಅಂತಹುದೇ ಯೋಜನೆಯಲ್ಲಿ ಪಾಲ್ಗೊಂಡಿದ್ದನೆಂಬ ವಿಷಯ ಗಮನ ಸೆಳೆಯುತ್ತದೆ.

೧೯೨೬ರ ಮಾರ್ಚ್ ವೇಳೆಗೆ, ಲಾಹೋರಿನಲ್ಲಿ ಸಂಘಟಿಸಲಾದ 'ನೌ ಜವಾನ್ ಭಾರತ್ ಸಭಾ'ದ ಕಾರ್ಯದರ್ಶಿಯಾಗಿದ್ದ ಭಗತ್‌ಸಿಂಗ್ ಸಕ್ರಿಯವಾಗಿ ಕ್ರಾಂತಿಕಾರಿ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಇಡೀ ಭಾರತದ ಶ್ರಮಿಕರು ಮತ್ತು ರೈತರನ್ನೊಳಗೊಂಡ ಸ್ವತಂತ್ರ ಗಣರಾಜ್ಯ ಸ್ಥಾಪನೆಯ ಗುರಿಯಿಟ್ಟುಕೊಂಡ "ನೌಜವನ್ ಭಾರತ ಸಭಾ"ಕ್ಕೆ ರಷ್ಯಾದ ಸಮಾಜವಾದಿ ಕ್ರಾಂತಿ ಪ್ರೇರಣೆಯಾಗಿತ್ತು. ವೈಜ್ಞಾನಿಕ ಸಮಾಜವಾದದ ತಿರುಳಿನ ಪರಿಚಯ ಸ್ಥೂಲವಾಗಿಯಾದರೂ ಭಗತ್‌ಸಿಂಗ್‌ನಿಗೆ ಇತ್ತೆಂಬುದು ಇದರಿಂದ ಸಾಬೀತಾಗುತ್ತದೆ ಆದರೆ ೧೯೩೦ರಲ್ಲಿ ಬ್ರಿಟಿಷ್ ಸರ್ಕಾರವು ಸಭಾ ಒಂದು ಕಾನೂನುಬಾಹಿರ ಸಂಸ್ಥೆಯೆಂದು ಘೋಷಿಸಿತು. ಆದರೆ ಭಗತ್‌ಸಿಂಗ್ ಪ್ರಾರಂಭಿಸಿದ ಸಭಾ ಅವರೊಡನೆ ಅಂತ್ಯಗೊಳ್ಳಲಿಲ್ಲ. ಫೀನಿಕ್ಸ್ ಹಕ್ಕಿಯಂತೆ ಅದು ಪದೇ ಪದೇ ಜನ್ಮ ತಾಳುತ್ತಲೇ ಬಂದಿದೆ. ಮತ್ತು ಉದ್ದೇಶ ಕೈಗೂಡುವವರೆಗೂ ಇದು ಮುಂದುವರಿಯುತ್ತಲೂ ಇರುತ್ತದೆ ವಿವಿಧ ಕಾಲಘಟ್ಟಗಳಲ್ಲಿ ಅದಕ್ಕೆ ಬೇರೆ ಬೇರೆ ಹೆಸರುಗಳನ್ನು ನೀಡಬಹುದಾದರೂ ಸಭಾದ ಚೇತನ ಸದಾಕಾಲವೂ ಸ್ಫುರಿಸುತ್ತಲೇ ಬಂದಿವೆ. ಭಗತ್‌ಸಿಂಗ್ ಚೇತನದಂತೆ ಅದೂ ಅಜರಾಮರ ಭಾರತದ ಪುರೋಗಾಮಿ ಯುವಕರಿಗೆ 'ನೌ ಜವಾನ್ ಭಾರತ್ ಸಭಾ' ಸದಾಕಾಲಕ್ಕೂ ಒಂದು ಅಮರಜ್ಯೋತಿಯಾಗಿದೆ.

ಕೀರ್ತಿ ಕಿಸಾನ್ ಪಕ್ಷದ ಸೋಹನ್‌ಸಿಂಗ್ ಜೋಶ್ ರಂತಹವರಿಂದ ಪ್ರೇರಿತನಾದ ಭಗತ್‌ಸಿಂಗ್‌ಗೆ ೧೯೨೮ರ ಡಿಸೆಂಬರ್ ೧೭ರಂದು ನಡೆದ ಪೊಲೀಸ್ ಅಧಿಕಾರಿ ಸಾಂಡರ್ಸ್‌ನ ಹತ್ಯೆಯ ನಂತರ ಆಶ್ರಯ ನೀಡಿದವರೇ ಸೋಹನ್‌ಸಿಂಗ್ ಜೋಶ್. ಸ್ಕಾಟ್‌ರನ್ನು ಹತ್ಯೆ ಮಾಡಲು ಹೋದ ಭಗತ್‌ಸಿಂಗ್, ಸುಖದೇವ್, ಮತ್ತು ರಾಜಗುರು ಹತ್ಯೆ ಮಾಡಿದ್ದು ಸಾಂಡರ್ಸ್‌ನನ್ನು ಬ್ರಿಟಿಷ್ ವಸಾಹತುಶಾಹಿಯನ್ನು ಹೊಡೆದೋಡಿಸಿ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವುದನ್ನು ಗುರಿಯಾಗಿ ಹೊಂದಿದ್ದ ಕ್ರಾಂತಿಕಾರಿಗಳು "ಹಿಂದೂಸ್ಥಾನ್ ಸಮಾಜವಾದಿ ಗಣತಂತ್ರ ಸಂಘಟನೆ"ಯನ್ನು ಸ್ಥಾಪಿಸಿದರು. ಭಗತ್‌ಸಿಂಗ್ ಈ ಸಂಘಟನೆಯ ಪ್ರೇರಕಶಕ್ತಿಯಲ್ಲಿ ಒಬ್ಬನಾಗಿದನು. ಸಮಾಜವಾದವನ್ನೇ ಒಪ್ಪದವರು ಅದೊಂದು ವಿದೇಶಿ ಕಲ್ಪನೆ ಅಥವಾ ಸರಕು ಎಂದು ಭಾವಿಸುವವರು ಮತೀಯ ರಾಜಕಾರಣವನ್ನೇ ತಮ್ಮ ಬಂಡವಾಳದವನ್ನಾಗಿರಿಸಿ ಕೊಂಡಿರುವವರು, ಕೋಟ್ಯಾಧಿಪತಿಗಳ ರಾಜಕೀಯ ಭಂಟರು, ಸಾಮ್ರಾಜ್ಯಶಾಹಿಯ ಕುನ್ನಿಗಳು ಮತ್ತು ಇವರೆಲ್ಲರ ಛಾಯೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಬೌದ್ಧಿಕವಾಗಿ ಉಳಿಸಿಕೊಂಡಿರುವವರು ರೈತ ಕಾರ್ಮಿಕರ ವಿರುದ್ಧ ದಮನ ಹಾಗೂ ದಬ್ಬಾಳಿಕೆಯನ್ನು ಅವಿರತವಾಗಿ ನಡೆಸಿಕೊಂಡು ಬರುತ್ತಿರುವವರು ಅರ್ಥಾತ್ ಶೋಷಕವರ್ಗದವರು. ಭಗತ್‌ಸಿಂಗ್ ಪರಂಪರೆಗೆ ಸೇರಿದವರು ತಾವು ಎಂದು  ಪ್ರಲಾಪಿಸುವುದು ಸಮಕಾಲೀನ ಇತಿಹಾಸದ ಕ್ರೂರ ಕುಚೋದ್ಯಗಳಲ್ಲೊಂದು.

೧೯೨೮ರ ಅಕ್ಟೋಬರ್ ೩೦ರಂದು ಸೈಮನ್ ಆಯೋಗ ಲಾಹೋರಾಗೆ ಬಂದಾಗ ಲಾಲಾ ಲಜಪಲ್‌ರಾಯ್ ಮತ್ತು ಮದನ ಮೋಹನ ಮಾಳವೀಯರ ನೇತೃತ್ವದಲ್ಲಿ ಜನತೆ ಪ್ರತಿಭಟನೆ ಸಲ್ಲಿಸಿತು. ಮುಂಚೂಣಿಯಲ್ಲಿ ಭಗತ್‌ಸಿಂಗ್ ಕೂಡ ಇದ್ದ. ಮೆರವಣಿಗೆಯ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದರು. ಅಧಿಕಾರಿ ಸ್ಕಾಟ್, ಲಾಲಾ ಲಜಪತ್‌ರಾಯ್ ಅವರ ಮೇಲೆ ಲಾಠಿ ಬೀಸಿದ. ಗಾಯಗೊಂಡ ಲಾಲಾ ಅದೇ ವರ್ಷದ ನವೆಂಬರ್ ೧೭ ರಂದು, ೧೮ ದಿನಗಳಿಗೆ ಮೃತರಾದರು. ಲಾಲಾರನ್ನು ಥಳಿಸಿದ್ದ ಸ್ಕಾಟ್ ಬಗ್ಗೆ ಭಗತ್‌ಸಿಂಗ್‌ಗೆ ಸಿಟ್ಟು ಬಂದಿತು. ಲಾಲಾರ ಸಾವಿಗೆ ತಾನು ಕಾರಣ ಅಲ್ಲವೆಂದು ಬ್ರಿಟಿಷ್ ಸರ್ಕಾರ ವಾದಿಸಿತು. ಆ ಮೊಂಡು ವಾದ ಹಾಗೂ ಕ್ರೌರ್ಯಗಳಿಂದ ಸಿಟ್ಟಿಗೆದ್ದ ಹಿಂದೂಸ್ಥಾನ್ ಸಮಾಜವಾದಿ ಗಣತಂತ್ರ ಸಂಘಟನೆಯ ಸದಸ್ಯರು ೧೦ ಡಿಸೆಂಬರ್ ೧೯೨೮ರಂದು ಸಭೆ ಸೇರಿ ಪ್ರತೀಕಾರ ಕಾರ್ಯಕ್ರಮವೊಂದನ್ನು ರೂಪಿಸಿದರು. ಸ್ಕಾಟ್‌ನ ಹತ್ಯೆಗೆ ಸಂಚು ಸಿದ್ಧವಾಯಿತು. ಆದರೆ ತಪ್ಪು ಸೂಚನೆಯಿಂದಾಗಿ ಸ್ಕಾಟ್‌ನ ಬದಲು ಜಿ.ಪಿ. ಸಾಂಡರ್ಸ್ ಹತ್ಯೆ ಆಯಿತು. ಮೊದಲು ರಾಜಗುರು, ನಂತರ ಭಗತ್‌ಸಿಂಗ್ ಗುಂಡು ಹಾರಿಸಿದ್ದರು. "ಮಿಲಿಯಗಟ್ಟಲೆ ಜನರ ಗೌರವಕ್ಕೆ ಪಾತ್ರರಾಗಿದ್ದ ನಾಯಕರು ಒಬ್ಬ ಯಃಕಶ್ಚಿತ್ ಪೊಲೀಸ್ ಅಧಿಕಾರಿಯ ಕಲುಷಿತ ಕೈಗಳಿಂದ ಕೊಲ್ಲಲ್ಪಡುವುದೆಂದರೆ ಇಡೀ ರಾಷ್ಟ್ರಕ್ಕೆ ಅವಮಾನ. ಇದನ್ನು ತೊಡೆದು ಹಾಕಬೇಕಾದ್ದು ಭಾರತದ ಕರ್ತವ್ಯವಾಗಿತ್ತು" ಎಂದು ಕರಪತ್ರ ಮೂಲಕ ಹತ್ಯೆಯನ್ನು ಸಮರ್ಥಿಸಿಕೊಳ್ಳಲಾಯಿತು. ಈ ಕರಪತ್ರವನ್ನು ಭಗತ್‌ಸಿಂಗ್ ಮತ್ತು ಚಂದ್ರಶೇಖರ್ ಆಜಾದ್ ಬರೆದಿದ್ದರೆಂದು ತರ್ಕಿಸುವುದು ದುಷ್ಕರವೇನಲ್ಲ ಅವರಿಬ್ಬರನ್ನೂ ಭಯೋತ್ಪಾದಕರೆಂದು ಗಾಂಧೀಜಿ ಇತ್ಯಾದಿ ನಾಯಕರು ಬಣ್ಣಿಸಿದ್ದರು. ಈ ಅಭಿಪ್ರಾಯಕ್ಕೆ ಯಾವ ಆಧಾರವೂ ಇಲ್ಲವೆಂಬುದು ಮುಂದೆ ಸ್ಪಷ್ಟವಾಗುತ್ತದೆ.

ಜವಾಹರಲಾಲ್ ನೆಹರು ತಮ್ಮ ಆತ್ಮಕಥನದಲ್ಲಿ ಈ ಬಗ್ಗೆ ಬರೆದಿರುವ ಮಾತುಗಳಿವು, "ಭಗತ್ ಸಿಂಗ್ ಒಬ್ಬ ಪ್ರತೀಕವಾದ (ಸಾಂಡರ್ಸ್‌ನನ್ನು ಕೊಂದ) ಅವನ ಕೃತ್ಯ ಮರೆತು ಹೋಯಿತು ಆದರೆ ಪ್ರತೀಕಾರ ಚಿರಕಾಲ ಉಳಿಯಿತು. ಕೆಲವೇ ತಿಂಗಳುಗಳಲ್ಲಿ ಪಂಜಾಬಿನ ಪ್ರತಿಯೊಂದು ಪಟ್ಟಣ ಮತ್ತು ಹಳ್ಳಿಯಲ್ಲೂ ಅವನು ಮನೆ ಮಾತಾದ, ಉತ್ತರ ಭಾರತದ ಎಷ್ಟೋ ಕಡೆಗಳಲ್ಲೂ ಈ ಮಾತು ನಿಜವಾಯಿತು. ಅವನನ್ನು ಕುರಿತ ಅಸಂಖ್ಯಾತ ಹಾಡುಗಳು ರಚನೆಯಾಯಿತು. ಅವನಿಗೆ ದೊರಕಿದ ಜನಪ್ರಿಯತೆ ಅತ್ಯಂತ ವಿಸ್ಮಯಕರವಾಗಿತ್ತು."

ಪೊಲೀಸರ ಕೈಗೆ ಸಿಗದೆ, ಓಡಾಡುತ್ತಿದ್ದ ಭಗತ್‌ಸಿಂಗ್ ಮತ್ತು ಅವನ ಗೆಳೆಯರು ಮತ್ತೊಂದು ಸಾಹಸಕ್ಕೆ ಸಜ್ಜಾದರು. ೧೯೨೯ರ ಏಪ್ರಿಲ್ ೮ರಂದು ಕೇಂದ್ರ ಶಾಸನ ಸಭೆಯಲ್ಲಿ ಸಾರ್ವಜನಿಕ ರಕ್ಷಣಾ ಕಾಯಿದೆ ಮತ್ತು ಕಾರ್ಮಿಕ ವಿವಾದ ಕಾಯಿದೆಗಳ ಮಂಡನೆ ಆಗಬೇಕಾಗಿದ್ದ ಸಮಯದಲ್ಲಿ ಬುದ್ಧಿವಂತಿಕೆಯಿಂದ ಸಭೆಯೊಳಗೆ ಪ್ರವೇಶ ಪಡೆದಿದ್ದ ಭಗತ್‌ಸಿಂಗ್ ಮತ್ತು ಬಿ.ಕೆ.ದತ್ ಯಾರಿಗೂ ಹಾನಿಯಾಗದಂತೆ ಆದರೆ ಎಲ್ಲರ ಗಮನ ಸೆಳೆಯುವಂತೆ ಸಭೆಯಲ್ಲಿ ಬಾಂಬ್ ಎಸೆದು, ನಿಂತಲ್ಲೇ ನಿಂತು "ಇಂಕ್ವಿಲಾಬ್ ಜಿಂದಾಬಾದ್" ಮತ್ತು "ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಧಿಕ್ಕಾರ" ಎಂಬ ಘೋಷಣೆಗಳನ್ನು ಕೂಗಿ, ಕರಪತ್ರಗಳನ್ನು ತೂರಿ, ಬಂಧನಕ್ಕೊಳಗಾದರು. ''ಕಿವುಡನೊಬ್ಬನಿಗೆ ಕೇಳಿಸುವಂತೆ ಹೇಳಬೇಕಾದರೆ ಗಟ್ಟಿಯಾಗಿ ಹೇಳಬೇಕಾಗುತ್ತದೆ" ಎಂದು ತಮ್ಮ ಕ್ರಮವನ್ನು ಸಮರ್ಥಿಸಿಕೊಂಡ ಸಂಘಟನೆಯು, ಬ್ರಿಟಿಷರ ಕ್ರೌರ್ಯ ಮತ್ತು ದೌರ್ಜನ್ಯಗಳನ್ನು ಖಂಡಿಸಿತು. ಭಗತ್‌ಸಿಂಗ್ ದಸ್ತಗಿರಿ ಆದಾಗ ಅವನ ಬಳಿ ಪಿಸ್ತೂಲು ಇತ್ತಾದರೂ ಅದನ್ನು ಅವನು ಯಾರತ್ತಲೂ ಗುರಿ ಮಾಡಿರಲಿಲ್ಲ ಎಂದು ಅವನನ್ನು ದಸ್ತಗಿರಿ ಮಾಡಿದ ಸಾರ್ಜೆಂಟ್ ಟೆರ್ರಿಯೇ ಹೇಳಿಕೆ ನೀಡಿದ್ದಾರೆ

ಭಗತ್‌ಸಿಂಗ್ ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಉಪವಾಸ ಸತ್ಯಗ್ರಹವನ್ನು ಅವನ ಸಂಗಾತಿಗಳೊಂದಿಗೆ ಪ್ರಾರಂಭಿಸಿದರು. ಇದರಿಂದ ಸ್ವಲ್ಪಮಟ್ಟಿಗೆ ಸುಧಾರಣೆ ಕಂಡು ಬಂದಿತು. ಇವರ ಉಪವಾಸ ಅಧ್ಯಾತ್ಮಿಕ ನಿಟ್ಟಿನಿಂದ ಅರ್ಥೈಸಲು ಯತ್ನಿಸಲಿಲ್ಲ. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಅದೂ ಒಂದು ಅಸ್ತ್ರವೆಂದು ಅವರು ಬಗೆದರೇ ವಿನಾ ಅದಕ್ಕೊಂದು ಬೇರೆ ಉದಾತ್ತವಾದ ಫಲ ಶ್ರುತಿಯನ್ನು ನೀಡಲು ಅವರು ಬಯಸಲಿಲ್ಲ. ೧೯೩೦ರ ಅಕ್ಟೋಬರ್ ೨ರಂದು ನ್ಯಾಯಾಲಯವು ಸಾಂಡರ್ಸ್ ಹತ್ಯೆಯ ಅಪರಾಧಿಗಳಿಗೆ 'ಸಾಯುವವರೆಗೂ ಕುತ್ತಿಗೆಗೆ ನೇಣುಹಾಕಬೇಕು' ಎಂಬ ಶಿಕ್ಷೆ ನೀಡಿತು. ನಂತರ ೧೯೩೧ ಮಾರ್ಚ್ ೨೩ರಂದು ಗಲ್ಲಿಗೇರಿಸಿ, ೨೦ರ ಬೆಳಗ್ಗೆ ಸಮಾಚಾರವನ್ನು ಬಹಿರಂಗಗೊಳಿಸಲು ನ್ಯಾಯಾಲಯ ಸೂಚಿಸಿತು. ಆದರೆ ಮಾರ್ಚ್‌ರಂದು ಸಂಜೆಯೇ ೭ ಗಂಟೆ ೩೩ ನಿಮಿಷಕ್ಕೆ ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಅವರನ್ನು ಗಲ್ಲಿಗೇರಿಸಲಾಯಿತು. ಆಗ ಭಗತ್‌ಸಿಂಗ್ ವಯಸ್ಸು ೨೪ ತುಂಬಿರಲಿಲ್ಲ. ಇಡೀ ಭಾರತದ ವಿನಂತಿಗೆ ಬ್ರಿಟೀಷ್ ಸರ್ಕಾರ ಮನ್ನಣೆ ತೋರಲಿಲ್ಲ ಅದಕ್ಕೆ ಪ್ರತ್ಯುತ್ತರವನ್ನು ನಿಟ್ಟುಸಿರು ಮತ್ತು ಕಣ್ಣೀರಿನ ರೂಪದಲ್ಲಿ ಕೊಡಲಾಗದು ಅವು ಅಸಹಾಯಕರ ಅಸ್ತ್ರಗಳು, ಕರುಣೆ, ಮಾನವೀಯತೆ ಮತ್ತು ಉದಾತ್ತತೆಯ ಭಾವನೆಗಳಿಗೆ ಬ್ರಿಟೀಷ್ ಸರ್ಕಾರ ಹೊರತಾಗಿದೆ. ಅದೊಂದು ಪೈಶಾಚಿಕ ಸರ್ಕಾರ ಶಕ್ತಿಗಲ್ಲದೆ ಬೇರೆಯಾವುದಕ್ಕು ಯದಕ್ಕೂ ಅದು ಮಣಿಯುವುದಿಲ್ಲ. ನಮಗೆ ಶಕ್ತಿಯಿದೆ, ಅದನ್ನು ಸತ್ಕಾರಣಕ್ಕಾಗಿ ಉಪಯೋಗಿಸೋಣವೆಂದು, ಬ್ರಿಟೀಷ್ ಸರ್ಕಾರ, ಬ್ರಿಟೀಷ್ ಸರಕುಗಳು, ಬ್ರಿಟೀಷ್ ವ್ಯಾಪಾರ, ಬ್ರಿಟೀಷ್ ವಿದ್ಯಾಭ್ಯಾಸ ಕ್ರಮ, ಇತ್ಯಾದಿಗಳನ್ನು ಬಹಿಷ್ಕರಿಸಿದರೆ ಬ್ರಿಟೀಷ್ ಸರ್ಕಾರವು ನಮ್ಮ ಪಾದಗಳಿಗೆ ಬೀಳಬೇಕಾದೀತು. ಆಗ ಹುತಾತ್ಮರ ರಕ್ತಕ್ಕೆ ಬೆಲೆ ನೀಡಿದಂತಾಗುತ್ತದೆ. ಭಗತ್‌ಸಿಂಗ್‌ನ ರಕ್ತದ ಬೆಲೆಯೆಂದರೆ ಭಾರತವು ಸ್ವತಂತ್ರವಾಗುವುದೊಂದೇ. ಅವರು ಮತ್ತು ಅವರ ಸಂಗಾತಿಗಳು ಪ್ರಾಣಾರ್ಪಣೆ ಮಾಡಿರುವುದು ಅದಕ್ಕಾಗಿಯೇ. ಚಿಕ್ಕವಯಸ್ಸಿಗೆ ಅಪಾರ ಎನ್ನುವಷ್ಟು ಸಾಧನೆ ಮಾಡಿ ಕ್ರಾಂತಿ, ಸ್ವಾಭಿಮಾನ ಮತ್ತು ಸ್ವಾತಂತ್ರ್ಯಗಳ ಅರ್ಥ ತಿಳಿಸಿಕೊಟ್ಟ ಧೀಮಂತ ಅಮರ ಜ್ಯೋತಿ ಭಗತ್‌ಸಿಂಗ್.

ಗಾಂಧಿ-ಇರ್ವಿನ್ ಒಪ್ಪಂದದಲ್ಲಿ ಘರವಾಲಿ ಸೈನಿಕರ ಬಿಡುಗಡೆಯ ಪ್ರಸ್ತಾಪವೇ ಇಲ್ಲದಿದ್ದಾಗ ಇನ್ನು ಭಗತ್‌ಸಿಂಗ್‌ನನ್ನು ಉಳಿಸುವುದರ ಪ್ರಸ್ತಾಪ ಹೇಗೆ ಬರಲು ಶಕ್ಯವಿತ್ತು ಎಂದು ಪ್ರಶ್ನಿಸಬೇಕಾಗಿದೆ. ಅಹಿಂಸೆಯ ಪಾಲನೆಯಲ್ಲಿ ಘರವಾಲಿ ಸೈನಿಕರು ಅತ್ಯುತ್ತಮ ಮಟ್ಟಕ್ಕೇರಿದ್ದರು. ಆದರೆ ಅಧಿಕಾರಿಗಳ ಅಜ್ಞೆಯನ್ನು ಮೀರುವುದು ಅಶಿಸ್ತಿನ ಮಾರ್ಗವೆಂದು ಗಾಂಧೀಜಿ ವಿವರಿಸಿದ್ದಾರೆ. ಗಾಂಧೀಜಿಯವರ ಪ್ರಕಾರ ಘರವಾಲಿ ಸೈನಿಕರು ಭಗತ್‌ಸಿಂಗ್ ಮತ್ತು ಅವನ ಸಂಗಾತಿಗಳು ಇತ್ಯಾದಿಯವರೆಲ್ಲಾ ಒಂದು ರೀತಿಯಲ್ಲಿ ಪರಮಾತ್ಮನಿಂದಲೇ ಶಿಕ್ಷಿಸಲಟ್ಟಿದ್ದರೋ ಏನೋ ಇರ್ವಿನ್ ಮತ್ತು ಬ್ರಿಟಿಷ್ ವಸಾಹತುಶಾಹಿ ಸರ್ಕಾರ ಕೇವಲ ಪರಮಾತ್ಮನ ಸಾಧನಗಳು ಅಷ್ಟೇಯೆಂದು. ಗಾಂಧೀಜಿಯವರು ಭಗತ್‌ಸಿಂಗ್‌ನನ್ನು ಉಳಿಸಲು ಮಾಡಿದ ಕ್ರಮಗಳನ್ನು ಒಳನೋಟಗಳನ್ನು ಅರಿಯಬೇಕಾಗಿದೆ.

ಲಾಹೋರ್ ಪಿತೂರಿ ಮೊಕದ್ದಮೆಯು ಜಾರಿಯಲ್ಲಿದ್ದು, ನ್ಯಾಯಾಲಯದೊಳಗಿನ ಹೋರಾಟಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸಮಯದಲ್ಲಾಗಲಿ, ಜೈಲಿನಲ್ಲಿ ಉಪವಾಸ ಜಾರಿಯಲ್ಲಿದ್ದಾಗಾಗಲಿ ಗಾಂಧೀಜಿ ಅವುಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಎಲ್ಲೂ ಬಹಿರಂಗವಾಗಿ ಹೊರಗೆಡಹಲಿಲ್ಲ. ಮೊಕದ್ದಮೆಯ ಸಹಾಯಾರ್ಥವಾಗಿ ಪೋಲೆಂಡಿನಿಂದ ಒಬ್ಬ ಮಹಿಳೆ ಸ್ವಲ್ಪ ಹಣ ಕಳಿಸಿದ್ದಳು. ಜಪಾನ್, ಕೆನಡಾ ಮತ್ತು ದೂರದ ದಕ್ಷಿಣ ಅಮೆರಿಕಾದಿಂದ ಹಣ ಸಹಾಯ ಮತ್ತು ಸಹಾನುಭೂತಿ ಬಂದಿತ್ತು. ಆದರೆ ನ್ಯಾಯಾಸ್ಥಾನದ ತೀರ್ಪು ಬರುವವರೆಗೆ ಆ ಬಗ್ಗೆ ಗಾಂಧೀಜಿ ಚಕಾರವೆತ್ತಿದಂತೆ ತೋರುವುದಿಲ್ಲ. ಜಿತೇಂದ್ರನಾಥ್ ದಾಸ್ ಜೈಲಿನಲ್ಲಿ ಉಪವಾಸ ಮಾಡಿ ಅಸುನೀಗಿದಾಗ ಮಾತ್ರ ಗಾಂಧೀಜಿ ನುಡಿದಿದ್ದರು; "ಅವನೊಬ್ಬ ನಿಷ್ಠಾವಂತ ಅಹಿಂಸಾವಾದಿ" ಬಹುಶಃ ಅಹಿಂಸಾವಾದಿ ಮಾತ್ರ ಆ ರೀತಿಯ ಆತ್ಮಬಲಿದಾನ ಮಾಡಲು ಶಕ್ತನೆಂದು ಅವರ ತಿಳುವಳಿಕೆ ಆಗಿದ್ದಿರಬೇಕು. ನೇಣುಗಂಬಕ್ಕೇರುವ ಕೆಲವು ದಿನಗಳ ಮುಂಚೆ ಸುಖದೇವ್ ಗಾಂಧೀಜಿಯರಿಗೊಂದು ಪತ್ರ ಬರೆದಿದ್ದರು. ಅದರ ಒಕ್ಕಣೆ ಭಾಗಶಃ ಹೀಗಿದ್ದಿತು; "ಸಮಾಜವಾದಿ ಪ್ರಜಾತಂತ್ರದ ಆಧಾರದ ಮೇಲೆ ದೇಶವನ್ನು ವ್ಯವಸ್ಥೆಗೊಳಿಸಬೇಕೆಂಬುದು ಕ್ರಾಂತಿಕಾರಿಗಳ ಮಹದಾಸೆ.... ಕ್ರಾಂತಿಕಾರಿಗಳಿಗೆ ತರ್ಕಬದ್ಧ ವಿವೇಚನೆ ಇಲ್ಲವೆಂದು ಅವರು ಕೇವಲ ವಿನಾಶಕಾರಿ ಕೆಲಸಗಳಲ್ಲಿ ಆನಂದ ಪಡೆಯುವವರೆಂದೂ ತಮ್ಮ ಗ್ರಹಿಕೆ ಇರಲಾರದೆಂದು ಊಹಿಸುತ್ತೇನೆ. ನಿಜವಾಗಿಯೂ ವಸ್ತುಸ್ಥಿತಿ ಇದರಿಂದ ಸಂಪೂರ್ಣವಾಗಿ ಭಿನ್ನವಾಗಿದೆ. ಪ್ರತಿ ಹೆಜ್ಜೆಯನ್ನಿಡುವಾಗಲೂ ಕ್ರಾಂತಿಕಾರಿಗಳು ತಮ್ಮ ಸುತ್ತಣ ಪರಿಸ್ಥಿತಿಯನ್ನು ಗ್ರಹಿಸಿ, ವಿಶ್ಲೇಷಣೆ ಮಾಡಿಕೊಳ್ಳುತ್ತಾರೆ.... ಕ್ರಿಯಾತ್ಮಕವಾದ ಅಂಶಗಳಿಗೆ ಒತ್ತುಕೊಡುವುದು ಅವರ ವಿಧಾನದ ಅವಿಭಾಜ್ಯ ಅಂಗ." ಈ ಪತ್ರವು ಗಾಂಧೀಜಿಯವರಿಗೆ ತಲುಪಿದ್ದಿತೋ ಇಲ್ಲವೋ ತಿಳಿಯದು. ಅವರಿಗೆ ಮುಟ್ಟಿಸಬೇಕೆಂದು ಪತ್ರವನ್ನು ಸುಖದೇವ್, ನ್ಯಾಯಾಸ್ಥಾನಕ್ಕೆ ಅರ್ಪಿಸಿದ್ದಂತೂ ಸತ್ಯ. ತಲುಪಿದ್ದೂ ಅದಕ್ಕೆ ಗಾಂಧೀಜಿ ಪ್ರತಿಕ್ರಿಯೆ ಸೂಚಿಸಿಲ್ಲದೆಯೂ ಇರಬಹುದು.

ಗಾಂಧೀಜಿಯರ ನಿಲುವನ್ನು ಹಲವು ಸಂದರ್ಭಗಳಲ್ಲಿ ಭಗತ್‌ಸಿಂಗ್ ಪ್ರಶ್ನಿಸಿದ್ದ ಹಾಗೂ ತಿರಸ್ಕರಿಸಿದ್ದ. ಯುವಕರಲ್ಲಿ ಮನವಿ ಮಾಡಿಕೊಳ್ಳುತ್ತಾನೆ. ಸಮಾಜವಾದಿ ಗಣತಂತ್ರ ರಾಜ್ಯದ ಸ್ಥಾಪನೆಗಾಗಿ ತೀವ್ರ ಆಸಕ್ತಿಯಿಂದ ದುಡಿಯಿರಿ. ನೀವು ಹಿಮ್ಮೆಟ್ಟದೆ ಹೋರಾಡಿದರೆ ಗುರಿಯನ್ನು ಮುಟ್ಟಿಯೇ ತೀರುತ್ತೀರಿ, ಆದರೆ ಕೇವಲ ಒಂದು ವರ್ಷದಲ್ಲಿ ಅಲ್ಲ, ಅದಕ್ಕೆ ಎಷ್ಟೋ ತ್ಯಾಗದ ಅವಶ್ಯಕತೆಯಿದೆ. ಎಷ್ಟೋ ಸಂಕಷ್ಟದ

ಅನುಭವಗಳನ್ನು ಸಹಿಸಬೇಕಾಗುತ್ತದೆ. ಇಲ್ಲಿ 'ಕೇವಲ ಒಂದು ವರ್ಷದಲ್ಲಿ' ಸ್ವಾತಂತ್ರ್ಯ ದಕ್ಕುತ್ತದೆಂದು ಅಸಹಕಾರ ಚಳುವಳಿಯನ್ನು ಪ್ರಾರಂಭಿಸುವಾಗ ೧೯೨೦ರಲ್ಲಿ ಗಾಂಧೀಜಿಯವರು ಹೇಳಿದ್ದುದನ್ನು ಮನಸ್ಸಿನಲ್ಲಿಟ್ಟುಕೊಂಡು ಭಗತ್‌ಸಿಂಗ್ ತನ್ನ ಪತ್ರದ ಕೊನೆಯ ಭಾಗದಲ್ಲಿ ಯುವಕರಿಗೆ ಸಹನೆಯನ್ನು ಹೊಂದಲು ಸೂಚಿಸಿದ್ದಾನೆಂಬುದನ್ನು ನಾವಿಲ್ಲಿ ಗಮನಿಸಬಹುದಾದ ಅಂಶವಾಗಿದೆ. ಮೂಲಭೂತವಾಗಿ ಭಗತ್‌ಸಿಂಗ್ ಸಾಮ್ರಾಜ್ಯಶಾಹಿಯ ಕಡುವಿರೋಧಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸನ್ನಿವೇಶಗಳ ವಿಕಾಸದಲ್ಲಿ ಸಾಮ್ರಾಜ್ಯಶಾಹಿಯು ವಿವಿಧ ಚಾರಿತ್ರಿಕ ಘಟ್ಟಗಳಲ್ಲಿ ವಿವಿಧ ಸ್ವರೂಪಗಳನ್ನು ತಾಳುತ್ತದೆ ಅದರ ಕ್ರೌರ್ಯ, ಕೃತಿಮತೆ ಮತ್ತು ಶೋಷಣೆಯ ಕ್ರಮ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯದ್ದಾಗಬಹದು ಅದನ್ನು ಗುರುತಿಸಿ ಆಯಾ ಚಾರಿತ್ರಿಕ ಘಟ್ಟಗಳಲ್ಲಿ ಸಾಮ್ರಾಜ್ಯಶಾಹಿಯ ಆ ನೀತಿ ಮತ್ತು ದಬ್ಬಾಳಿಕೆಗಳನ್ನು ಕಾರ್ಯತಃ ವಿರೋಧಿಸುವುದು ಭಗತ್‌ಸಿಂಗ್ ಪರಂಪರೆ ಸೇರಲು ಅರ್ಹರಾಗುವವರ ಪ್ರಾಥಮಿಕ ಗುಣವಾಗಿರಬೇಕು. ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯಕ್ಕೆ ಭಗತ್‌ಸಿಂಗ್ ಒತ್ತು ಕೊಟ್ಟಿದ್ದು ಭಾರತವು ಸ್ವಾವಲಂಬನೆಯ ಗುರಿಯನ್ನು ಹೊಂದಬೇಕೆಂಬ ಕಾರಣಕ್ಕಾಗಿಯೆಂದು ಯುವ ಜನಾಂಗ ಎಚ್ಚೆತ್ತುಕೊಳ್ಳಬೇಕು.

ಸಾಮ್ರಾಜ್ಯಶಾಹಿಯ ವಿರೋಧವೆಂದರೆ ಒಬ್ಬ ವ್ಯಕ್ತಿಯನ್ನು ಹೀಗಳೆಯುವುದಲ್ಲ, ಅವನನ್ನು ನಾಶಮಾಡುವುದಲ್ಲ. ಅದೊಂದು ವ್ಯವಸ್ಥೆಯ ವಿರುದ್ಧದ ಹೋರಾಟ, ಅದರ ಅಡಿಪಾಯವನ್ನು ಭಗ್ನಗೊಳಿಸಲು ನಡೆಸಬೇಕಾದ ಹೋರಾಟ. ಬಾಂಬನ್ನೊಗೆಯುವುದರಿಂದ ಸಾಮಾಜ್ಯಶಾಹಿಯನ್ನು ಕಿತ್ತೊಗೆಯಬಹುದೆಂಬ ಭ್ರಾಂತಿ ಭಗತ್‌ಸಿಂಗ್‌ಗೆ ಇರಲಿಲ್ಲ. "ಕಿವುಡರಿಗೂ ಕೇಳಿಸುವಂತೆ" ಗುಡುಗಲೂ ಮತ್ತು ಯುವಕರಿಗೆ ಹೋರಾಟದ ಕರೆ ನೀಡಲು ಅದೊಂದು ಸಾಧನವಾಗಿತ್ತು ಅಷ್ಟೇ. ಇಂದಿನ ಸಾಧನಗಳೇನಾಗಬೇಕೆಂಬುದನ್ನು ಪರಿಸ್ಥಿತಿಯ ವಸ್ತುನಿಷ್ಠ ವಿಶ್ಲೇಷಣೆಯಿಂದ ಕಂಡುಕೊಳ್ಳಬೇಕಾದದು ನಮ್ಮ ಕರ್ತವ್ಯವೆಂದು ದುಡಿಯುವ ಜನರ ಐಕ್ಯ ಹೋರಾಟಕ್ಕೆ. ಭಗತ್‌ಸಿಂಗ್ ನೀಡಿದ ಆದ್ಯತೆಯನ್ನು ಮೆಚ್ಚಬೇಕಾಗಿದೆ.

ಮತೀಯ ದ್ವೇಷಗಳನ್ನು ತೊಡೆದುಹಾಕುವುದರಲ್ಲಿ ಭಗತ್‌ಸಿಂಗ್‌ಗಿದ್ದ ನಿಷ್ಠೆ ಅಪಾರವಾದುದು. ಭಗತ್‌ಸಿಂಗ್‌ಗೆ ವ್ಯಕ್ತಿಗತವಾದ ಖ್ಯಾತಿ ಎಷ್ಟು ದೊರೆಯಿತೋ ಅಷ್ಟೇ ಖ್ಯಾತಿ ಅವನ ವಿಚಾರಧಾರೆಗೆ ದೊರೆತಿದ್ದರೆ ಮತೀಯ ಪ್ರಕ್ಷೋಭೆಯಿಂದುಂಟಾಗಿರುವ ಮತ್ತು ಇಂದಿಗೂ ಉಂಟಾಗುತ್ತಿರುವ ಸಾವು ನೋವುಗಳು ಮತ್ತು ಹಿಂಸಾಕೃತ್ಯಗಳು ಸ್ವಲ್ಪಮಟ್ಟಿಗಾದರೂ ಕಡಿಮೆಯಾಗಿರುತ್ತಿದ್ದುವೇನೋ. ಯಾವ ಧರ್ಮವನ್ನೂ ತುಚ್ಛೀಕರಿಸದೆ ಧರ್ಮ ನಿರಪೇಕ್ಷತೆಗಾಗಿ ಅವನು ಕೈಗೊಂಡ ಕ್ರಮಗಳು ನಿಜಕ್ಕೂ ಸ್ತುತ್ಯರ್ಹವಾದವು. ತಾನು ನಾಸ್ತಿಕನಾದರೂ ಆಸ್ತಿಕರನ್ನು ಅವಹೇಳನ ಮಾಡುವುದು ಭಗತ್‌ಸಿಂಗ್‌ಗೆ ಹೊರತಾಗಿತ್ತು. ಆದರೆ ಎಲ್ಲ ಧರ್ಮಗಳ ಮೂಢನಂಬಿಕೆಗಳನ್ನು ಸಮಾನವಾಗಿ ಜರೆದವನು ಭಗತ್‌ಸಿಂಗ್. ಕಾರ್ಯತಃ ಮಾನವತೆಯ ಆಧಾರದ ಮೇಲೆ ಸಮಷ್ಟಿಯ ವ್ಯವಸ್ಥೆಯನ್ನು ಆಗುಗೊಳಿಸಬಹುದೆಂಬುದನ್ನು ತನ್ನ ಕೆಲವು ಸೀಮಿತ ಕ್ರಿಯೆಗಳಿಂದ ಭಗತ್‌ಸಿಂಗ್ ಸಿದ್ಧಗೊಳಿಸಿದ್ದಾರೆ. ಮತೀಯ ಸಂಘರ್ಷಗಳನ್ನು ತಮ್ಮ ಪ್ರಮುಖ ಆಯುಧವನ್ನಾಗಿರಿಸಿ ಕೊಂಡಿರುವವರು. ಭಗತ್‌ಸಿಂಗ್‌ರ ಈ ಚಿಂತನೆ ಮತ್ತು ಕ್ರಿಯೆಗಳತ್ತ ಗಮನಕೊಡುವುದು ಒಳ್ಳೆಯದು.

ರಾಜಕೀಯವಾಗಿ ಭಗತ್‌ಸಿಂಗ್ ಒಬ್ಬ ಕ್ರಿಯಾತ್ಮಕ ಚಿಂತಕನಾಗಿದ್ದನೆಂಬುದಕ್ಕೆ ಹಿಂದುಸ್ಥಾನ ಸಮಾಜವಾದಿ ಗಣತಂತ್ರ ಸಂಘಟನೆಯ ಸಂವಿಧಾನ ಒಂದು ಸಾಕ್ಷಿಯಾಗಿದೆ. ಸಾಮಾಜಿಕ ನ್ಯಾಯವಿಲ್ಲದೆ ಸುಸಂಸ್ಕೃತ ಜೀವನದ ಆದರ್ಶ ಬರಿಯ ಬಾಯಿ ಮಾತಾಗುತ್ತದೆ ಎಂಬುದು ಆ ಸಂವಿಧಾನದ ಹಿಂದಿರುವ ಸೂಕ್ಷ್ಮ ಗ್ರಹಿಕೆ. ಆರ್ಥಿಕ ಸಮಾನತೆ, ಶೋಷಣಾರಹಿತ ಸಮಾಜದ ಆಯಕಟ್ಟು, ಮತ್ತು ಧರ್ಮ ನಿರಪೇಕ್ಷತೆಗಳು ಸಾಮಾಜಿಕ ನ್ಯಾಯಕ್ಕೆ ಅತ್ಯಗತ್ಯವಾದ ಅಡಿಪಾಯದ ಭಾಗಗಳೆಂದು ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳ ಈ ವಿಶ್ಲೇಷಣೆಯನ್ನು ನಮ್ಮ ಇಂದಿನ ಸಾಮಾಜಿಕ-ಆರ್ಥಿಕ ರಚನೆ ಮತ್ತು ಸಂವಿಧಾನದ ಕಟ್ಟುಪಾಡುಗಳನ್ನು ಅರ್ಥೈಸುವಾಗ ನೆನಪಿನಲ್ಲಿಟ್ಟು ಕೊಳ್ಳಬೇಕಾದುದು ಅತ್ಯವಶ್ಯಕವಾಗಿದೆ.

ವೈಯಕ್ತಿಕ ಕಾರ್ಯಾಚರಣೆಯಿಂದ ವರ್ಗಶತ್ರುಗಳನ್ನು ನಿರ್ಮೂಲನ ಮಾಡಿ ಕ್ರಾಂತಿಯನ್ನುಂಟುಮಾಡಲು ಹೊರಡುವ ಈ ಶತಮಾನದ ಮಾವೋವಾದಿ ನಕ್ಸಲೀಯರು ಭಗತ್‌ಸಿಂಗ್ ೨೦ರ ದಶಕದಲ್ಲಿ ಅರಿತುಕೊಂಡದ್ದನ್ನು ಇನ್ನೂ ಅರಿಯಲಾರದೆ ಯುವಕ ಶಕ್ತಿಯನ್ನು ಹೇಗೆ ನುಚ್ಚು ನೂರು ಮಾಡಿ ಕ್ರಾಂತಿಯ ಹಾದಿಯಲ್ಲಿ ಮುಳ್ಳಿನ ಪೊದೆಗಳನ್ನು ಬೆಳಸುತ್ತಿದ್ದಾರೆ. ಕ್ರಾಂತಿಯೆಂದರೆ ಜನಸಮುದಾಯದ ಸಾಮೂಹಿಕ ಕಾರ್ಯಚರಣೆ ಅದಕ್ಕೆ ಪ್ರಜ್ಞಾಪೂರ್ವಕವಾದ ಪ್ರವೃತ್ತಿ ಬೇಕಾಗಿದೆ. ಕ್ರಾಂತಿಯ ಬೀಜ ಬಿತ್ತುವುದೆಂದರೆ ಜನ ಸಮುದಾಯವನ್ನು ಈ ಪ್ರವೃತ್ತಿಯತ್ತ ಕೊಂಡೊಯ್ಯುವುದು. ಭಗತ್‌ಸಿಂಗ್‌ನ ಈ ಸೈದ್ಧಾಂತಿಕ ನಿರೂಪಣೆ ಮಾರ್ಕ್ಸ್ ವಾದದ ಮೂಲತತ್ವಗಳ ನಿರೂಪಣೆಯೇ ಆಗಿದೆ. ಸಂಘಟಿತ ಕಮ್ಯುನಿಸ್ಟ್ ಚಳುವಳಿಯ ಭಾಗವಾಗಿರದಿದ್ದರೂ ಭಗತ್‌ಸಿಂಗ್ ಕ್ರಮೇಣ ಕಮ್ಯುನಿಸ್ಟ್ ಸಿದ್ಧಾಂತದತ್ತ ವಿಕಾಸ ಹೊಂದುತ್ತಿದ್ದನೆಂಬುದಕ್ಕೆ ಇದೂ ನಿದರ್ಶನವಾಗಿರಬಹುದು.

ಭಗತ್‌ಸಿಂಗ್ ಕೇವಲ ರಾಷ್ಟ್ರ ಪ್ರೇಮಿಯಲ್ಲ, ಅವನೊಬ್ಬ ಧೀಮಂತ ಸೈದ್ಧಾಂತಿಕ ಚೇತನ ನಮ್ಮ ರಾಷ್ಟ್ರೀಯ ಹೋರಾಟದಲ್ಲಿ ನೂತನ ಶತಮಾನದ ಆದರ್ಶ ಪ್ರತಿನಿಧಿ. ನಮ್ಮ ಕೆಂಪು ಪ್ರಣಾಮಕ್ಕೆ ಸದಾ ಅರ್ಹನಾದ ಪ್ರಜ್ವಲವಾದ ಧ್ರುವತಾರೆ. ವೈಜ್ಞಾನಿಕ ಸಮಾಜವಾದದ ವ್ಯವಸ್ಥೆಗಾಗಿ ನಡೆಯುವ ಹೋರಾಟಕ್ಕೆ ದಾರಿದೀಪವಾಗಿದ್ದಾರೆ. ಸ್ವಾತಂತ್ರ್ಯ, ರಾಜಕೀಯ, ಧರ್ಮಗಳನ್ನು ಎಂದೂ ಒಂದೇ ತಕ್ಕಡಿಯಲ್ಲಿ ತೂಗುವುದರಿಂದ ಒಳ್ಳೆಯ ಫಲ ದೊರೆಯಲಾರದು. ಭಗತ್‌ಸಿಂಗ್ ಬದುಕಿನಿಂದ ನಾವು ಮತ್ತು ನಮ್ಮ ಮುಂದಿನ ಪೀಳಿಗೆಯವರು ಕಲಿಯಬೇಕಾದ್ದು ಬಹಳ ಇದೆ. ಆಗಿನ ಬ್ರಿಟೀಷ್ ಸರ್ಕಾರ ಮತ್ತು ಅದರ ಕೆಲವು ಅಧಿಕಾರಿಗಳು ಹಾಗೂ ಭಾರತೀಯರೇ ಆದ ಕೆಲವು ಸ್ವಾತಂತ್ರ್ಯ ಹೋರಾಟಗಾರರ ಮನೋಭಾವಗಳನ್ನು ತಿಳಿಯಬೇಕು. ಭಗತ್‌ಸಿಂಗ್‌ನ ಬದುಕು ಮಾತ್ರವಲ್ಲದೆ, ಆ ಕಾಲದ ರಾಜಕೀಯ ಮತ್ತು ಸಾಮಾಜಿಕ ಬದುಕನ್ನೂ ಪ್ರಾಮಾಣಿಕವಾಗಿ ಅರ್ಥೈಸಿಕೊಳ್ಳಬೇಕು. ಭಗತ್‌ಸಿಂಗ್‌ನ ಸಿದ್ಧಾಂತಗಳು ವೈಜ್ಞಾನಿಕ ದೃಷ್ಟಿ ಕೋನದಿಂದ ಅಧ್ಯಯನ ಮಾಡಿದಾಗ ಸಾಧ್ಯವಾಗುತ್ತದೆ.